## ಮಾಹಿತಿ ಹಕ್ಕು ಅಧಿನಿಯಮ-2005 ರ, 4(1) ( ಬಿ) ಪ್ರಕಟಣೆ

## ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು

## (ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯತಿಗಳ ಸಬಲೀಕರಣ ಯೋಜನೆ)

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

| ಕ್ರ.ಸಂ | ಕೈಪಿಡಿ | ಉತ್ತರ |
|---|---|---|
| 1 | ಸಂಸ್ಥೆಯ ವಿವರಗಳು ಮತ್ತು ಕರ್ತವ್ಯಗಳು. | ಗ್ರಾಮ ಸ್ವರಾಜ್ -ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಅನುಷ್ಠಾನ ಗೊಳ್ಳುತ್ತಿರುವ ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಯೋಜನೆಯಾಗಿದೆ. ಈ ಯೋಜನೆಯು 2006-07 ನೇ ಆರ್ಥಿಕ ಸಾಲಿನಿಂದ ಆರಂಭಗೊಂಡಿದ್ದು 5 ವರ್ಷಗಳ ಅವಧಿಗೆ ರೂ. 674.14(ಪರಿಷ್ಕೃತ) ಕೋಟಿಗಳ ಯೋಜನಾ ಗಾತ್ರವನ್ನು ಹೊಂದಿದೆ.<br>**ಗ್ರಾಮ ಸ್ವರಾಜ್ ಯೋಜನೆಯ ಪ್ರಮುಖ ಉದ್ದೇಶಗಳು.**<br>**ಈ ಕೆಳಗಿನಂತೆ ಪಟ್ಟಿ ಮಾಡಿದೆ.**<br>1. ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣ.<br>2.ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ 1341 ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನವನ್ನು ಸೂತ್ರದ ಆಧಾರದ ಮೇಲೆ ಒದಗಿಸುವುದು.<br>3.ಸಂಗ್ರಹಣಾ ಪದ್ಧತಿ ಮತ್ತು ಹಣಕಾಸು ನಿರ್ವಹಣೆಯ ಪುನಶ್ಚೇತನ.<br>4.ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಅಧಿನಿಯಮ 1993 ರ ಅಡಿಯಲ್ಲಿ ವಹಿಸಲಾದ ವಿವಿಧ ಶ್ರೇಣಿಯ ಸೇವೆಗಳ ನೀಡಿಕೆಯಲ್ಲಿ ಪರಿಣಾಮಕಾರಿ ಸುಧಾರಣೆ. |
| 2 | ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕರ್ತವ್ಯಗಳು ಮತ್ತು ಅಧಿಕಾರಗಳು. | **1.ಅಪರ ಮುಖ್ಯ ಕಾರ್ಯದರ್ಶಿಗಳು.**<br>ಅಪರ ಮುಖ್ಯ ಕಾರ್ಯದರ್ಶಿಗಳು.,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಒಟ್ಟಾರೆ ಮೇಲ್ವಿಚಾರಣೆ ಮಾರ್ಗದರ್ಶನ ಹಾಗೂ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದಲ್ಲಿ ತೀರ್ಮಾನಗಳನ್ನು ಕೈಗೊಳ್ಳುವರು.<br>**2.ಕಾರ್ಯದರ್ಶಿಗಳು (ಪಂಚಾಯತ್ ರಾಜ್).**<br>ಕಾರ್ಯದರ್ಶಿಗಳು. (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಒಟ್ಟಾರೆ ಮೇಲ್ವಿಚಾರಣೆ ಮಾರ್ಗದರ್ಶನ ಹಾಗೂ ಗ್ರಾಮ ಸ್ವರಾಜ್ ಯೋಜನೆಯ ಅನುಷ್ಠಾನದಲ್ಲಿ ತೀರ್ಮಾನಗಳನ್ನು ಕೈಗೊಳ್ಳುವರು.<br>**3.ಮುಖ್ಯಸ್ಥರು**<br>ಗ್ರಾಮ ಸ್ವರಾಜ್ ಯೋಜನಾ ಕಛೇರಿಯ ಮುಖ್ಯಸ್ಥರಾಗಿರುತ್ತಾರೆ, ಹಾಗೂ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ಯೋಜನೆಯ ಅನುಷ್ಠಾನದ ಬಗ್ಗೆ ವರದಿ ಮಾಡುವರು.<br>4. **ಅಪರ ಮುಖ್ಯಸ್ಥರು -ಕಾರ್ಯಾಚರಣೆ .**<br>ಅ) ಯೋಜನಾ ಮಾರ್ಗಸೂಚಿಗಳನ್ನು ಹೊರಡಿಸುವುದು ಹಾಗೂ ಯೋಜನೆಯ ಅನುಷ್ಠಾನದ ಬಗ್ಗೆ ಮೇಲ್ವಿಚಾರಣೆ ಮಾಡುವುದು.<br>ಆ) ಕ್ರಿಯಾಯೋಜನೆ ಸಿದ್ಧಪಡಿಸುವುದು ಹಾಗೂ ಮೇಲ್ವಿಚಾರಣೆ.<br>ಇ) ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿರುವ ಸಂಪನ್ಮೂಲ ಕೇಂದ್ರಗಳಿಗೆ ತಾಂತ್ರಿಕ ಸಲಹೆಗಳನ್ನು ನೀಡುವುದು. |

ಈ) ರಾಜ್ಯ ಮಟ್ಟದ ಚಾಲನಾ ಸಮಿತಿ ಸಭೆಯನ್ನು ಆಯೋಜಿಸುವುದು. ಅನುಪಾಲನಾ ವರದಿ ತಯಾರಿಸುವುದು ಹಾಗೂ ಇತರ ವಿಭಾಗಗಳೊಂದಿಗೆ ಸಹಕರಿಸುವುದು.

**5. ಅಪರ ಮುಖ್ಯಸ್ಥರು- ಹಣಕಾಸು ಮತ್ತು ಸಂಗ್ರಹಣೆ**

ಅ) ಗ್ರಾಮ ಸ್ವರಾಜ್ ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿ ಮತ್ತು ಇತರೆ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವುದು.

ಆ)ಎಫ್.ಎಂ. ಆರ್, ಎ, ಎಫ್, ಎಸ್ (Financial Monitoring receipt), ( Annual Financial Statement), ಮತ್ತು ಯೋಜನಾ ಮೊತ್ತದ ಮರುಪಾವತಿಗಳ ಉಸ್ತುವಾರಿ

ಇ) ಆಡಿಟ್ ವರದಿಗಳ ತಯಾರಿಕೆ ಮತ್ತು ಮೇಲ್ವಿಚಾರಣೆ .

ಈ) ಬಜೆಟ್ ತಯಾರಿಕೆ, ಹೆಚ್ಚುವರಿ ಬಜೆಟ್ ತಯಾರಿಕೆ ಮತ್ತು ಅನುದಾನ ಬಿಡುಗಡೆ.

**6. ಯೋಜನಾಧಿಕಾರಿ - (ಪರಿಸರ)**

ಗ್ರಾಮ ಪಂಚಾಯತಿಗಳಲ್ಲಿ ಪರಿಸರ ನಿರ್ವಹಣಾ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ, ಪರಿಸರ ನಿರ್ವಹಣಾ ಮಾರ್ಗಸೂಚಿಗಳನ್ವಯ ತರಬೇತಿಗಳನ್ನು ಎ.ಎನ್.ಎಸ್. ಎಸ್.ಐ.ಆರ್. ಡಿ ಯಿಂದ ಏರ್ಪಡಿಸುವುದು ಮತ್ತು ಓ.ಕೆ. ಕಾರ್ಡ್ ಅಳವಡಿಸಿಕೊಳ್ಳುವ ಬಗ್ಗೆ ಮೇಲ್ವಿಚಾರಣೆ ನಡೆಸುವುದು. ಸಾಮರ್ಥ್ಯಸೌಧ ಮತ್ತು ಸ್ಯಾಟ್ ಕಾಂ ಸ್ಟುಡಿಯೋಗಳ ನಿರ್ಮಾಣದ ಬಗ್ಗೆ ಉಸ್ತುವಾರಿ ಮಾಡುವುದು.

**7.ಸಂಗ್ರಹಣಾಧಿಕಾರಿ.**

ಗ್ರಾಮ ಸ್ವರಾಜ್ ಯೋಜನೆಗೆ ಸಂಬಂಧಿಸಿದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ.

ಅಂತರ್ಜಾಲದ ಮುಖಾಂತರ ಗ್ರಾಮ ಪಂಚಾಯತಿಗಳಿಗೆ ಅನುದಾನ ಬಿಡುಗಡೆ, ಗ್ರಾಮ ಸ್ವರಾಜ್ ಯೋಜನೆಯ ವಾರ್ಷಿಕ ಬಜೆಟ್ ತಯಾರಿಸುವುದು. ಮಹಾಲೇಖಪಾಲಕರ ಆಡಿಟ್ ವರದಿಗಳಿಗೆ ಕಂಡಿಕೆವಾರು ಅನುಪಾಲನಾ ವರದಿ ತಯಾರಿಸುವುದು ಮತ್ತು ಲೆಕ್ಕ ಮರು ಹೊಂದಾಣಿಕೆ ಮಾಡುವುದು.

**8. ಪಂಚಾಯತಿ ಸೌಲಭ್ಯ ತಜ್ಞರು.**

ಯೋಜನಾ ಅನುಷ್ಠಾನದಲ್ಲಿ ಮುಖ್ಯಸ್ಥರಿಗೆ ಸಹಾಯ ಮಾಡುವುದು ಮತ್ತು ಗ್ರಾಮ ಪಂಚಾಯತಿಗಳೊಂದಿಗೆ ಪರಸ್ಪರ ಸಮಾಲೋಚನೆ ನಡೆಸುವುದು ಹಾಗೂ ಮುಕ್ತ ಅನುದಾನ ಅನುಷ್ಠಾನದಲ್ಲಿ ಮೇಲ್ವಿಚಾರಣೆ ನಡೆಸುವುದು. ಸಾಮರ್ಥ್ಯ ಸೌಧ ಮತ್ತು ಸ್ಯಾಟ್‌ಕಾಂ ಉಪಕೇಂದ್ರಗಳ ಮೇಲ್ವಿಚಾರಣೆ ನಡೆಸುವುದು.

**9. ಪ್ರೋಗ್ರಾಮರ್ಸ್.**

ಯೋಜನೆಗೆ ಸಂಬಂಧಿಸಿದ ಮಾಹಿತಿಯನ್ನು ತಾಲ್ಲೂಕು ಸಂಪನ್ಮೂಲ ಕೇಂದ್ರಗಳಿಂದ ಪಡೆಯುವುದು ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಿಗೆ ಸ್ಪಂದಿಸುವುದು.

**10. ಕಾರ್ಯ ನಿರ್ವಾಹಕ ಸಹಾಯಕರು.**

ಯೋಜನೆಗೆ ಸಂಬಂಧಿಸಿದ ಎಲ್ಲಾ ಕಡತಗಳು ಮತ್ತು ಸಿಬ್ಬಂದಿ ಶಾಖೆಯ ಕಡತಗಳ ನಿರ್ವಹಣೆ .

**11. ಗ್ರೂಪ್-ಡಿ**

| | | |
|---|---|---|
| | | **ವಿಕೇಂದ್ರೀಕರಣ ವಿಶ್ಲೇಷಣಾ ಕೋಶ**<br>**12. ಮುಖ್ಯಸ್ಥರು- ವಿಶ್ಲೇಷಣೆ**<br>ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು ವ್ಯವಸ್ಥೆಯ ಮಾದರಿಯನ್ನು ರೂಪಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಪ್ರತಿ ವರ್ಷದ ದತ್ತಾಂಶಗಳನ್ನು ಸಲ್ಲಿಸುವ ಹಾಗೂ ಸರಿಪಡಿಸುವುದರ ಉಸ್ತುವಾರಿ, ಪ್ರಶ್ನೆಗಳಿಗೆ ಉತ್ತರಿಸುವುದು/ ಸಮಸ್ಯೆಗಳನ್ನು ಬಗೆಹರಿಸುವುದು. ಹಾಗೂ ತಾಂತ್ರಿಕ ನೆರವನ್ನು ನೀಡುವುದು ಮತ್ತು ದತ್ತಾಂಶಗಳನ್ನು ಸರ್ಕಾರಿ ಸಂಸ್ಥೆಗಳು ಹಾಗೂ ಸಂಶೋಧಕರು ಬಳಸಲು ನೆರವಾಗುವಂತೆ ಕ್ರೋಢೀಕರಿಸುವುದು. ಗ್ರಾಮ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡುವ ಸಲುವಾಗಿ ಸೂತ್ರವನ್ನು ರಚಿಸುವುದು.<br>**13.ಸಂಶೋಧನಾಧಿಕಾರಿ**<br>ಉನ್ನತೀಕರಣ ಮತ್ತು ಆರ್ಥಿಕ ವಿಶ್ಲೇಷಣೆ, ಭೌತಿಕ ಹಾಗೂ ಸಾಮಾಜಿಕ ಮೌಲ್ಯಮಾಪನ ಅಧ್ಯಯನ ನಡೆಸುವುದು, ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಣಾ ಕೋಶಕ್ಕೆ ಹಾಗೂ ಇತರೆ ಸಂಶೋಧನಾ ಸಂಸ್ಥೆಗಳಿಗೆ ಒದಗಿಸುವುದು.<br>**14. ಸಂಶೋಧನಾ ಸಹಾಯಕರು.**<br>ಅಧ್ಯಯನ ಕಾರ್ಯಕ್ಕಾಗಿ ಅಂಕಿಅಂಶಗಳ ಮಾಹಿತಿಯನ್ನು ಸಂಗ್ರಹಿಸುವುದು ಕ್ಷೇತ್ರಮಟ್ಟದಲ್ಲಿ ಸಮೀಕ್ಷೆ ನಡೆಸಿ ಕರಡು ವರದಿ ಸಿದ್ಧಪಡಿಸುವುದು.<br>**15.ಪ್ರೋಗ್ರಾಮರ್ಸ್**<br>ಡೆಟಾಬೇಸ್ ನಿರ್ವಹಣೆ, ಕಛೇರಿ ಪತ್ರ ವ್ಯವಹಾರ ಮತ್ತು ವೆಬ್‌ಸೈಟ್ ನಿರ್ವಹಣೆ. |
| 3 | ಯೋಜನೆಯ ಬಗ್ಗೆ ತೀರ್ಮಾನ ಗಳನ್ನು ತೆಗೆದು ಕೊಳ್ಳುವುದು, ಕಾರ್ಯ ವಿಧಾನ, ವಿವಿಧ ಹಂತಗಳ ಮೇಲ್ವಿಚಾರಣೆ ಹಾಗೂ ಉತ್ತರದಾಯಿತ್ವ. | 1) ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಯೋಜನಾ ಕಛೇರಿಯ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸಿ ಯೋಜನೆಗೆ ಸಂಬಂಧಿಸಿದ ಎಲ್ಲಾ ತೀರ್ಮಾನಗಳನ್ನು ತೆಗೆದುಕೊಳ್ಳುವರು.<br>**ಅ)ಮುಕ್ತ ಅನುದಾನ.**<br>ಸೂತ್ರದ ಆಧಾರದ ಮೇಲೆ ಮುಕ್ತ ಅನುದಾವನ್ನು ಗ್ರಾಮ ಪಂಚಾಯತಿಗಳಿಗೆ ಆನ್‌ಲೈನ್ ಮೂಲಕ ಬಿಡುಗಡೆ ಮಾಡುವುದು.<br>ಗ್ರಾಮ ಪಂಚಾಯತಿಗಳು ಕ್ರಿಯಾ ಯೋಜನೆಯನ್ನು ತಯಾರಿಸಿ ಗ್ರಾಮ ಸಭೆಯಲ್ಲಿ ಅನುಮೋದನೆ ಪಡೆದು ಹಾಗೂ ಕೆ.ಟಿ.ಪಿ.ಪಿ ಮತ್ತು ವಿಶ್ವಬ್ಯಾಂಕ್ ಸಂಗ್ರಹಣಾ ಪದ್ಧತಿಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವರು. ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮೇಲ್ವಿಚಾರಣೆ ಮತ್ತು ಉಸ್ತುವಾರಿ ವಹಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವರು.<br>**ಆ) ತರಬೇತಿ ಚಟುವಟಿಕೆ / ಸಾಮರ್ಥ್ಯಾಭಿವೃದ್ಧಿ .**<br>ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮತ್ತು ಸ್ವ-ಸಹಾಯ ಸಂಘ ಸಂಸ್ಥೆಗಳಿಗೆ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡುವುದು, ಯೋಜನೆಯ ಪ್ರಮುಖ ಉದ್ದೇಶವಾಗಿರುತ್ತದೆ. ತರಬೇತಿಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೈಸೂರು, ಇವರ ಕಡೆಯಿಂದ ಚುನಾಯಿತ ಪ್ರತಿನಿಧಿಗಳಿಗೆ, ಸ್ವ-ಸಹಾಯ ಗುಂಪುಗಳಿಗೆ, ಪಂಚಾಯತ್ ರಾಜ್ ನೌಕರರಿಗೆ ಮತ್ತು ಇತರೆ ಇಲಾಖೆಗಳ ನೌಕರರಿಗೆ ಉಪಗ್ರಹ ಆಧಾರಿತ ತರಬೇತಿ ಮತ್ತು ಮುಖಾಮುಖಿ ತರಬೇತಿಯನ್ನು ನೀಡಲಾಗುತ್ತಿದೆ. |

| | | |
|---|---|---|
| | | ಇ) ಸಾಮರ್ಥ್ಯಸೌಧ.<br>ಪಂಚಾಯತ್ ರಾಜ್ ಸಂಸ್ಥೆಗಳ ಸಾರ್ಮಾರ್ಥ್ಯಾಭಿವೃದ್ಧಿಪಡಿಸಲು ರಾಜ್ಯದ 175 ತಾಲ್ಲೂಕುಕೇಂದ್ರಗಳಲ್ಲಿ ಸಾಮರ್ಥ್ಯ ಸೌಧ ಕಟ್ಟಡಗಳ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ ಕಟ್ಟಡಗಳು ತರಬೇತಿಗಳನ್ನು ನೀಡಲು ಉಪಯುಕ್ತವಾಗಿವೆ. ಸದರಿ ಕಟ್ಟಡಗಳನ್ನು ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಗಳು ನಿರ್ಮಾಣ ಮಾಡುತ್ತಿದ್ದಾರೆ. ಹಾಗೂ ನಿರ್ಮಾಣ ಕೆಲಸವನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮೇಲ್ವಿಚಾರಣೆ ನಡೆಸುವರು.<br>ಈ) ಸ್ಯಾಟ್ ಕಾಂ ಕೇಂದ್ರಗಳು.<br>ಪ್ರಾದೇಶಿಕ ಭಾಷೆಯಲ್ಲಿ ತರಬೇತಿ ನೀಡಲು ರಾಜ್ಯದ 5 ಜಿಲ್ಲಾ ಕೇಂದ್ರಗಳಲ್ಲಿ ಸ್ಯಾಟ್‌ಕಾಂ ಉಪಕೇಂದ್ರಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮೈಸೂರು ಇವರ ಸಹಾಯದಿಂದ ಸ್ಥಾಪಿಸಲಾಗಿರುತ್ತದೆ. |
| 4 | ಯೋಜನೆಯ ಅನುಷ್ಠಾನದಲ್ಲಿ ನಿಗಧಿಯಾಗಿರುವ ನಿಯಮಾವಳಿಗಳು | ವಿಶ್ವಬ್ಯಾಂಕ್ ನಿಗದಿಪಡಿಸಿರುವ ನಿಯಮಾವಳಿಗಳಂತೆ ಗ್ರಾಮ ಸ್ವರಾಜ್ ಯೋಜನೆಯ ಕಾರ್ಯಾಚರಣೆ ಕೈಪಿಡಿ, ಸಂಗ್ರಹಣ ಕೈಪಿಡಿ ಮತ್ತು ರಾಜ್ಯ ಸರ್ಕಾರದಿಂದ ಒಪ್ಪಲಾದ ಸೂಚನೆಗಳನ್ನು ಪಾಲಿಸುವುದು. |
| 5 | ಯೋಜನೆಯ ಅನುಷ್ಠಾನದಲ್ಲಿ ಅಥವಾ ಸಿಬ್ಬಂದಿಗಳು ಪಾಲಿಸಬೇಕಾಗಿರುವ ನಿಯಮಗಳು, ನಿಬಂಧನೆಗಳು, ಸೂಚನೆಗಳು. | i) ಕಾರ್ಯಾಚರಣೆ ಕೈಪಿಡಿ<br>ii) ಸಂಗ್ರಹಣಾ ಕೈಪಿಡಿ<br>iii) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ -1993 |
| 6 | ಯೋಜನೆಯಡಿ ನಿಗದಿಪಡಿಸಿರುವ ದಾಖಲೆಗಳ ವಿವರಗಳು. | ಕಛೇರಿ ಕಡತಗಳು, ದಸ್ತಾವೇಜು ಮತ್ತು ವಿದ್ಯುನ್ಮಾನ ರೂಪದಲ್ಲಿ ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿದ ಮಾಹಿತಿ. |
| 7 | ಪ್ರಸ್ತುತ ಯೋಜನೆ ಮತ್ತು ಬದಲಾವಣೆ ಒಳಗೊಂಡ ಯೋಜನೆಗಳ ಪೂರಕವಾಗಿ ಹಾಗೂ ಸಾರ್ವಜನಿಕವಾಗಿ ಯೋಜನೆಗಳನ್ನು ರೂಪಿಸುವ ಮತ್ತು ಆಡಳಿತಾತ್ಮಕವಾಗಿ ಪಾಲುಗಾರಿಕೆ ಹೊಂದುವುದು. | ಗ್ರಾಮ ಸ್ವರಾಜ್ ಯೋಜನೆ ವಿಶ್ವಬ್ಯಾಂಕ್ ನೆರವಿನ ಯೋಜನೆಯಾಗಿದ್ದು, ವಿಶ್ವಬ್ಯಾಂಕಿನ ತಂಡವು ಯೋಜನೆಯ ಅನುಷ್ಠಾನದಲ್ಲಿ ಮೇಲುಸ್ತುವಾರಿ ನಡೆಸುತ್ತಿದೆ. |
| 8 | ಮಂಡಳಿ, ಸಭೆ, ಸಮಿತಿಗಳು ಹಾಗೂ ಯಾವುದೇ ಎರಡು ಅಥವಾ ಎರಡಕ್ಕಿಂತ ಹೆಚ್ಚು ಜನ ಒಳಗೊಂಡ ಸಲಹಾ ಸಮಿತಿಗಳ ನಡಾವಳಿಗಳನ್ನು ಸಾರ್ವಜನಿಕವಾಗಿ ಪ್ರಕಟಣೆ ಮಡುವುದು. | ಗ್ರಾಮ ಸ್ವರಾಜ್ ಯೋಜನೆಗೆ ಸಂಬಂಧಿಸಿದಂತೆ ರಾಜ್ಯಮಟ್ಟದಲ್ಲಿ ಚಾಲನಾ ಸಮಿತಿ ರಚಿಸಲಾಗಿರುತ್ತದೆ. ಈ ಸಮಿತಿಯು ಯೋಜನೆಯ ಉಸ್ತುವಾರಿ ಮತ್ತು ಪರಿಶೀಲನೆ ಹಾಗೂ ಯೋಜನಾ ಅನುಷ್ಠಾನ ತಂಡಗಳಿಗೆ ಮಾರ್ಗಸೂಚಿಯಾಗಿದೆ. |
| 9 | ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ. | ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 40 ದಿನಾಂಕ: 17-12-2005 ಮತ್ತು 144 ದಿನಾಂಕ: 31-08-2007 ರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಲಾಗಿದೆ. |

| | | |
|---|---|---|
| 1 | ಮುಖ್ಯಸ್ಥರು-ಯೋಜನೆಯ ಮುಖ್ಯಸ್ಥರಾಗಿರುತ್ತಾರೆ.- ನಿಯೋಜನೆ | 01 |
| 2 | ಅಪರ ಮುಖ್ಯಸ್ಥರು - ಕಾರ್ಯಾಚರಣೆ | 01 |
| 3 | ಅಪರ ಮುಖ್ಯಸ್ಥರು ಹಣಕಾಸು ಮತ್ತು ಸಂಗ್ರಹಣೆ | 01 |
| 4 | ಉಪ- ಮುಖ್ಯಸ್ಥರು (ಮಾಹಿತಿ) | 01 |
| 5 | ಸಂಗ್ರಹಣಾಧಿಕಾರಿಗಳು | 01 |
| 6 | ಉಪ- ಮುಖ್ಯಸ್ಥರು (ಪರಿಸರ) | 01 |
| 7 | ಪಂಚಾಯತಿ ಸೌಲಭ್ಯ ತಜ್ಞರು | 04 |
| 8 | ಯೋಜನಾಧಿಕಾರಿಗಳು (ಮಾಹಿತಿ) | 03 |
| 9 | ಯೋಜನಾಧಿಕಾರಿಗಳು (ಪರಿಸರ) | 01 |
| 10 | ಕಾರ್ಯ ನಿರ್ವಾಹಕ ಸಹಾಯಕರು | 13 |
| 11 | ವಾಹನ ಚಾಲಕರು/ ಗ್ರೂಪ್-ಡಿ | 03 |

**ವಿಕೇಂದ್ರೀಕರಣ ವಿಶ್ಲೇಷಣಾ ಘಟಕ**

| | | |
|---|---|---|
| 1 | ಮುಖ್ಯಸ್ಥರು, ವಿಶ್ಲೇಷಣೆ | 01 |
| 2 | ಸಂಶೋಧನಾ ಅಧಿಕಾರಿಗಳು | 02 |
| 3 | ಸಂಶೋಧನಾ ಸಹಾಯಕರು | 04 |
| 4 | ಹೆಚ್ಚುವರಿ ವಿಶೇಷ ವಿಷಯ ತಜ್ಞರು. | ಅಗತ್ಯಕ್ಕೆ ತಕ್ಕಂತೆ |

**10** ಮಾಹೆಯಾನ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಸಂಭಾವನೆ ಮತ್ತು ಪರಿಹಾರಗಳ ಪದ್ಧತಿ.

| ಕ್ರ.ಸಂ | ಹೆಸರು ಮತ್ತು ಪದನಾಮ | ಮೂಲ ವೇತನ ರೂ. |
|---|---|---|
| 1 | ಕೆ.ಯಾಲಕ್ಕಿಗೌಡ<br>ಮುಖ್ಯಸ್ಥರು (ಪ್ರ), ಗ್ರಾಮ ಸ್ವರಾಜ್ ಯೋಜನೆ | ರೂ.56,550/- |
| 2 | ಡಾ. ಎಂ. ಆರ್. ಏಕಾಂತಪ್ಪ<br>ಅಪರ ಮುಖ್ಯಸ್ಥರು (ಕಾರ್ಯಾಚರಣೆ) | 50,100/- |
| 3 | ಶ್ರೀ. ಹೆಚ್. ಮುನ್ನಾವರ್ ಅಹ್ಮದ್<br>ಅಪರ ಮುಖ್ಯಸ್ಥರು (ಹಣಕಾಸು) | 61,950/- |
| 4 | ಜಿ. ಆರ್. ಶ್ರೀರಾಮರೆಡ್ಡಿ<br>ಪಂಚಾಯತಿ ಸೌಲಭ್ಯ ತಜ್ಞರು | 45,300/- |
| 5 | ಎಂ.ವಿ. ಮಂಜುನಾಥ್<br>ಪಂಚಾಯತಿ ಸೌಲಭ್ಯ ತಜ್ಞರು | 45,300/- |
| 6 | ಡಿ.ಆರ್.ಶಿವಪ್ಪ<br>ಪಂಚಾಯತಿ ಸೌಲಭ್ಯ ತಜ್ಞರು | 28,800/- |
| 7 | ಶ್ರೀಮತಿ ಕೃಪ<br>ಪಂಚಾಯತಿ ಸೌಲಭ್ಯ ತಜ್ಞರು | 54,700/- |
| 8 | ಲತಾ ಎಸ್. ಹೆಚ್.<br>ಪಂಚಾಯತಿ ಅಭಿವೃದ್ಧಿ ಅಧಿಕಾರಿ | 22,200/- |

| ಕ್ರ.ಸಂ | ಗ್ರಾಮ ಸ್ವರಾಜ್ ಯೋಜನೆಯ ಸಮಾಲೋಚಕರ ವಿವರ | ಸಂಚಿತ ವೇತನ ಮೊತ್ತ ರೂ. |
|---|---|---|
| 1 | ಎಂ.ವಿ.ಜಯಣ್ಣ | 43,923/- |
| 2 | ನಾಯಕ್ ಟಿ. ಹೆಚ್. ಎಂ | 24,200/- |
| 3 | ನಿಂಗೇಗೌಡ | 24,200/- |
| 4 | ಪುಷ್ಪ ಟಿ.ಎಸ್ | 18,150/- |
| 5 | ಅಮೃತ ವರ್ಷಿಣಿ | 18,150 |
| 6 | ಮೊಹಮ್ಮದ್ ಇಮ್ತಿಯಾಜ್ | 18,150/- |
| 7 | ಆರ್. ಎಸ್. ಸುಹಾಸಿನಿ | 18,125/- |
| 8 | ಸುಧಾ ಅಶ್ವಿನ್ ಎಂ. | 17,206/- |
| 9 | ಶಿವರಾಮಯ್ಯ | 14,520/- |
| 10 | ವಿಕಾಸ್ ಯು ಕುಲಕರ್ಣಿ | 14,520/- |
| 11 | ನಿಖಿಲಾ.ಡಿ. | 14,520/- |
| 12 | ಆರ್. ಕೆ. ಶಶಿಕಲಾ | 12,100/- |
| 13 | ನಾಗರಾಜ್ ಕೆ. ಆರ್ | 12,136/- |
| 14 | ಸಿದ್ಧಯ್ಯ | 10,539/- |
| 15 | ಯಶವಂತ್ | 10,539/- |
| 16 | ರಾಘವೇಂದ್ರ | 7,260/- |

**ವಿಕೇಂದ್ರೀಕರಣ ವಿಶ್ಲೇಷಣಾ ಕೋಶ**

| | | |
|---|---|---|
| 17 | ಹೆಚ್. ವೇಣುಗೋಪಾಲ್ | 29,055/- |
| 18 | ಸೌಮ್ಯ ಆರ್. | 27,672/- |
| 19 | ಶಿವಕುಮಾರ್ | 6,050/- |

| | | |
|---|---|---|
| 11 | ಪ್ರತಿ ಸಂಸ್ಥೆಗೆ ಹಂಚಿಕೆಯಾದ ಬಜೆಟ್, ಸೂಚಿಸುವ ಯೋಜನೆಗಳು, ಪ್ರಸ್ತಾಪಿತ ವೆಚ್ಚಗಳು ಹಾಗೂ ವಿತರಣೆಗೆ ಸಂಬಂಧಿಸಿದ ವರದಿಗಳು. | **ಯೋಜನೆಯ ಘಟಕಗಳು** — **ನಿಗದಿಯಾಗಿರುವ ಅನುದಾನ ರೂ. ಕೋಟಿಗಳಲ್ಲಿ**<br>ಅ) ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯತ್ ಸಬಲೀಕರಣ ಯೋಜನೆಯು ದಿನಾಂಕ:30-03-2014ಕ್ಕೆ ಮುಕ್ತಾಯಗೊಂಡಿರುತ್ತದೆ.<br>ಹಾಗೂ ಯೋಜನಾ ಕಛೇರಿಯು ಮುಂದುವರೆದಿರುವುದರಿಂದ ದಿನಾಂಕ:01-4-2014ರಿಂದ ಯೋಜನಾ ಕಛೇರಿಯ ಆಡಳಿತ ವೆಚ್ಚ ಮತ್ತು ಗ್ರಾಮ ಪಂಚಾಯತಿಗಳಿಗೆ ಕಂಪ್ಯೂಟರ್‌ಗಳನ್ನು ಖರೀದಿಸಿದ ವೆಚ್ಚ ಮಾತ್ರ ರಾಜ್ಯ ವಲಯದಲ್ಲಿ ಭರಿಸಲಾಗಿದೆ.<br>ರೂ 1.01ಕೋಟಿ ಆಡಳಿತ ವೆಚ್ಚ ಮತ್ತು ಗ್ರಾಮ ಪಂಚಾಯತಿಗಳಿಗೆ ಕಂಪ್ಯೂಟರ್ ಖರೀದಿಸಿದ ವೆಚ್ಚ ರೂ 27.64ಕೋಟಿಗಳನ್ನು ಭರಿಸಲಾಗಿದೆ. |

| | | |
|---|---|---|
| | | |
| 12 | ಸಹಾಯಧನ ಒಳಗೊಂಡ ಕಾರ್ಯಕ್ರಮಗಳು ಮತ್ತು ಫಲಾನುಭವಿಗಳ ವಿವರಗಳು. | ಅನ್ವಯಿಸುವುದಿಲ್ಲ |
| 13 | ಯೋಜನೆಯ ರಿಯಾಯತಿಗಳು, ಪರವಾನಿಗೆ ಅಥವಾ ಅಧಿಕೃತ ಮಂಜೂರಾತಿಯ ಬಗ್ಗೆ. | ಅನ್ವಯಿಸುವುದಿಲ್ಲ |
| 14 | ಯೋಜನೆಯ ಬಗ್ಗೆ ಲಭ್ಯವಿರುವ ಮಾಹಿತಿಯ ವಿವರಗಳು ಅಥವಾ ವಿದ್ಯುನ್ಮಾನ ರೂಪದಲ್ಲಿ ಮಾಹಿತಿ. | ಗ್ರಾಮ ಸ್ವರಾಜ್ ಯೋಜನಾ ಕಛೇರಿಯ ಮಾಹಿತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.<br>Website:www.rdpr.kar.nic.in |
| 15 | ಮಾಹಿತಿ ಪಡೆಯುವ ಬಗ್ಗೆ ಸಾರ್ವಜನಿಕರಿಗೆ ಲಭ್ಯವಿರುವ ವಿವರಗಳು, ಕಛೇರಿ ವೇಳೆ, ಗ್ರಂಥಾಲಯದ ವೇಳೆ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ವಾಚನಾಲಯ ಕೊಠಡಿಯನ್ನು ನಿರ್ವಹಿಸುತ್ತಿರುವ ಬಗ್ಗೆ. | ಕಛೇರಿ ವೇಳೆ:<br>ಬೆ:10.00 ರಿಂದ ಸಂ-5.30<br>ಭೋಜನ ವಿರಾಮ<br>ಮ: 1.30 ರಿಂದ ಮ: 2-15 |
| 16 | ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಇತರೆ ವಿವರಗಳು | ಡಾ. ಎಂ. ಆರ್. ಏಕಾಂತಪ್ಪ<br>ಅಪರ ಮುಖ್ಯಸ್ಥರು (ಕಾರ್ಯಾಚರಣೆ)<br>ಗ್ರಾಮ ಸ್ವರಾಜ್ ಯೋಜನೆ<br>ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ<br>080-22372029/28 ಫ್ಯಾಕ್ಸ್: 22372025 |
| 17 | ನಿಗದಿಪಡಿಸಿರುವ ಇತರೆ ವಿಷಯಗಳು. | ----- |

(ಡಾ. ಎಂ. ಆರ್. ಏಕಾಂತಪ್ಪ)
ಅಪರ ಮುಖ್ಯಸ್ಥರು (ಕಾರ್ಯಾಚರಣೆ)
ಹಾಗೂ ಸಾರ್ವಜನಿಕ ಮಾಹಿತಿ ಅಧಿಕಾರಿ
ಗ್ರಾಮ ಸ್ವರಾಜ್ ಯೋಜನೆ
ಗ್ರಾ. ಅ. ಮತ್ತು ಪಂ. ರಾಜ್ ಇಲಾಖೆ